"ನಿನ್ನೆ ರಾತ್ರಿ ಟಾರ್ಚ್ ಬೆಳಕಲ್ಲಿ ನೋಡ್ದಾಗ ನೆಲದಲ್ಲಿದ್ದ ದೂಳಿನ ಹೊದಿಕೆಯಲ್ಲಿ ಹೆಜ್ಜೆಗಳು, ಮೇಜು ಸರಿಸಿದ ಗುರುತು ಕಂಡವು. ನೆಲಮಾಳಿಗೆ ಇರಬಹುದೆಂಬ ಗುಮಾನಿ ಬಂತು. ವಾಚ್ ಸಿಕ್ಕಿದ ಜಾಗ ನೋಡ್ದಾಗ ಹೆಜ್ಜೆ ಗುರುತುಗಳು ಮನೆಯ ಹಿಂಬಾಗಿಲಿನತ್ತ ಹೋಗಿದ್ದು ಕಾಣ್ತು. ಹಿಂಬಾಗಿಲಿನಿಂದ ಒಳಗೆ ಹೋಗಿರೋದು ಖಚಿತವಾಯ್ತು. ಇದು ಅಡಗುತಾಣವಾಗಿರಬೇಕೆಂದು ಊಹಿಸ್ದೆ. ಇಲ್ಲಿಂದ ಸದ್ಯದಲ್ಲಿ ಕದಲಲಾರರು ಅಂತ ಭಾವಿಸಿ, ಬೆಳಿಗ್ಗೆ ಬೇಗನೆ ಇಲ್ಲಿಗೆ ಬರೋ ಯೋಜನೆ ಹಾಕ್ದೆ. ಉಳಿದಿದ್ದನ್ನ ಹೋಗ್ತಾ ಹೇಳ್ತೀನಿ..."

ನಾನು ಕಾರನ್ನು ಮತ್ತನ್ನೂರು ರಸ್ತೆಯ ಕಡೆಗೆ ಓಡಿಸಿದೆ.

"ರಚನ್ ಕೋಟು ತೆಗೆದುಕೊಂಡು ಹೋದಾಗ್ಲೇ ನನ್ಗೆ ಹೊಳೆದುಬಿಡ್ತು. ಕೋಟಿಗೂ, ಆತನ ನಾಪತ್ತೆಗೂ ಸಂಬಂಧ ಇದೆ! ಅವ್ನು ಮೊದಲನೇ ಸಲ ನಾಪತ್ತೆಯಾದಾಗ ಹೋಗಿದ್ದು ಶಿವಮೊಗ್ಗಕ್ಕೆ. ಅದಕ್ಕೂ ಕೆಲವೇ ದಿನಗಳ ಮುನ್ನ ಕೋಟು ಹೊಲಿಸಿದ್ದ. ಈ ಬಾರಿಯೂ ಕೋಟನ್ನು ವಾಶ್ ಮಾಡಿ ಕೊಂಡೊಯ್ದಿದ್ದ. ಯಾಕಿರಬಹುದು? ಅದಕ್ಕೆ ಕೊಡಬಹುದಾದ ತಾರ್ಕಿಕ ವಿವರಣೆಯೆಂದರೆ ಆತ ವೇಷ ಹಾಕ್ತಾ ಇದಾನೆ! ಆ ವೇಷ ಮಾಡೋಕೆ ಕೋಟು ಅನಿವಾರ್ಯ!! ಅರ್ಥವಾಯ್ತೆ? ಇಂಗ್ಲೀಷಿನಲ್ಲಿ ಇಂಪರ್ಸನೇಶನ್ ಅಂತಾರೆ. ಸೋಗು ಹಾಕೋದು!! ರಚನ್‌ಗೆ ಯಾರೋ ಫೋಟೊ ಮೂಲಕ ಯಾವಾಗ, ಎಲ್ಲಿ ಬರಬೇಕೆಂಬ ನಿರ್ದೇಶನ ನೀಡ್ತಾರೆ. ಮೊಬೈಲ್ ಬಳಸಿದ್ರೆ ತೊಂದ್ರೆ ಅಂತ ಈ ರೀತಿ. ಅಲ್ಲಿ ರಚನ್ ಕೋಟು ಧರಿಸಿ, ಮಾಳೇಟಿರ ಸುಬ್ಬಯ್ಯ ಆಗ್ತಾನೆ!"

"ಆದ್ರೆ ಸುಬ್ಬಯ್ಯ ಮುದುಕ!"

"ಸಣ್ಣ ಮೇಕಪ್ ಮಾಡಿದ್ರೆ ವಯಸ್ಸು ಹೆಚ್ಚಾದಂತೆ ಮಾಡೋದು ಕಷ್ಟವೇನಲ್ಲ. ಹಾಂ, ರಚನ್‌ಗೆ ಫೋಟೊ ನೀಡಿದ ಕವರು 'ಕೀರ್ತಿ ಸ್ಟೇಶನರ್ಸ್' ಅನ್ನುವ ಅಂಗಡಿದ್ದು. ಅದು ಇರೋದು ಕಾಮಾಕ್ಷಿ ದೇವಾಲಯದ ಹತ್ತಿರ. ಹಾಗಾಗಿ ಆ ಫೋಟೊ ಕಳಿಸಿದವರು ಅಲ್ಲಿಯೇ ಅಕ್ಕಪಕ್ಕದವರು ಅಂತ ಊಹಿಸ್ದೆ. ಇಲ್ದೇ ಇದ್ರೆ, ಕವರು ತರಲಿಕ್ಕೇ ಅಂತ ಕೀರ್ತಿ ಸ್ಟೇಶನರ್ಸ್‌ವರೆಗೆ ಹೋಗೋ ಅಗತ್ಯವಾದ್ರೂ ಏನು? ಆ ಫೋಟೊ ಮುದ್ರಿಸಿದ್ದು ಎಚ್ ಪಿ ಅಥವಾ ಎಪ್ಸನ್ ಪ್ರಿಂಟರಿನಲ್ಲಿ. ದುಬಾರಿ ಕಲರ್ ಪ್ರಿಂಟರ್ ಖರೀದಿಸಿದವರನ್ನು ಪತ್ತೆ ಮಾಡೋಕೆ ಅವುಗಳ ವಿತರಕರಲ್ಲಿ ವಿಚಾರಿಸ್ದೆ. ಕೀರ್ತಿ ಸ್ಟೇಶನರ್ಸ್‌ನ ಸನಿಹವಿರುವ ವಿಳಾಸ ಎರಡು ಸಿಕ್ತು. ಅದರಲ್ಲಿ ಒಂದು ಹೆಸರನ್ನು ಸುಲಭವಾಗಿ ತೆಗೆದು ಹಾಕ್ದೆ. ಯಾಕಂದ್ರೆ ಅದು ಅಲ್ಲೇ ಇದ್ದ ಫೋಟೊ ಸ್ಟುಡಿಯೋದವನು. ಇನ್ನೊಂದು ಹೆಸರು ಕೊಂಡೀರ ಪರೇಶ್! ಗ್ರೀನ್ ಲ್ಯಾಂಡ್ ಎಸ್ಟೇಟ್‌ನ ನಿವಾಸಿ. ವಿತರಕರಲ್ಲಿದ್ದ ರಿಪೇರಿ ಮಾಡೋ ಟೆಕ್ನಿಷಿಯನ್ನನ್ನು ವಿಚಾರಿಸ್ದಾಗ ಕುತೂಹಲಕಾರಿ ಸಂಗತಿ ತಿಳಿಯಿತು. ಪರೇಶ್ ಅಲ್ಲಿಯ ಮೆನೇಜರ್. ಎಸ್ಟೇಟಿನ ಯಜಮಾನ ಒಬ್ಬ ಮುದುಕ. ಎಲ್ಲಾ ವ್ಯವಹಾರ ನೋಡಿಕೊಳ್ಳೋದು ಪರೇಶ್. ಆ ಮುದುಕನ ಮಗ ಕೆಲವು ವರ್ಷಗಳ ಹಿಂದೆ ತೀರಿಕೊಂಡನಂತೆ, ಎಲ್ಲೋ ಇಂಗ್ಲಂಡಿನಲ್ಲಿ. ನನ್ಗೆ ಆಗ ಮನದಟ್ಟಾಯಿತು ನಾನು ಹುಡುಕ್ತಾ ಇರೋ ಆಸಾಮಿನೇ ಆ ಮುದುಕ."

"ರಚನ್ ಹೈದರಾಬಾದಿಗೆ ಹೋಗಿದ್ದು?"

"ಬಿದ್ದಪ್ಪ, ಎಲ್ಲಾ ನಗರಗಳಲ್ಲೂ ನನ್ಗೆ ನೆಟ್‌ವರ್ಕ್ ಇದೆ –ನನ್ನಂತಹದೇ ಪತ್ತೇದಾರಿ ಸಂಸ್ಥೆಗಳೊಂದಿಗೆ. ಹೈದರಾಬಾದಿನ ನನ್ನ ಸ್ನೇಹಿತನಿಗೆ ರಚನ್ ಹೋಗಿದ್ದ ಹೋಟೆಲಿನ ಹೆಸರು, ದಿನಾಂಕ ಹೇಳ್ದೆ. ಆ ದಿನ ರಚನ್ ಆ ಹೋಟೆಲಲ್ಲಿ ಉಳಿದುಕೊಂಡಿದ್ದ. ಆದ್ರೆ ಹೆಸರು ಮಾತ್ರ